ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ವಿಭಾಗ / ವಿಷಯ : DEPARTMENT / SUBJECT:

ದಿನಾಂಕ : DATE: 12/6/2020

**2.49 ಲಕ್ಷವಿದ್ದ ಸಂಖ್ಯೆ 270ಕ್ಕೆ ಇಳಿಕೆ  ಕರೊನಾ ಸಂಕಷ್ಟದಿಂದ ಮಕ್ಕಳನ್ನು ಕೆಲಸಕ್ಕೆ ಕಳಿಸುವ ಆತಂಕ**

# 10 ವರ್ಷದಲ್ಲಿ ಬಾಲಕಾರ್ಮಿಕ ಪದ್ಧತಿ ಶೇ.99 ಇಳಿಕೆ

12/6/2020

■ ವಿಜಯವಾಣಿ ವಿಶೇಷ ಬೆಂಗಳೂರು

ರಾಜ್ಯದಲ್ಲಿ 2011ರ ಗಣತಿ ಪ್ರಕಾರ, 2.49 ಲಕ್ಷವಿದ್ದ ಬಾಲಕಾರ್ಮಿಕರ ಸಂಖ್ಯೆ ಈಗ ಬರೀ 270ಕ್ಕೆ ಇಳಿಕೆಯಾಗಿದೆ. ಅಂದರೆ ಶೇ.99 ಬಾಲಕಾರ್ಮಿಕ ಪದ್ಧತಿ ನಿಯಂತ್ರಣಕ್ಕೆ ಬಂದಿದೆ ಎಂದು ಕಾರ್ಮಿಕ ಇಲಾಖೆ ಮಾಹಿತಿ ಕೊಟ್ಟಿದೆ. ಇಟ್ಟಿಗೆ ಕಾರ್ಖಾನೆ, ಗಂಧದ ಕಡ್ಡಿ ಫ್ಯಾಕ್ಟರಿ, ಬ್ಯಾಗ್ ತಯಾರಿಕೆ ಸೇರಿ ಇನ್ನಿತರ ಕೈಗಾರಿಕೆಗಳಲ್ಲಿ ಬಾಲ ಕಾರ್ಮಿಕರು ದುಡಿಯುತ್ತಿದ್ದು, ಇದೀಗ ಕರೊನಾದಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಕುಟುಂಬಗಳು ಮಕ್ಕಳನ್ನು ಕೆಲಸ ಕಳಿಸಲು ಆತಂಕಪಡುತ್ತಿವೆ. ಜೂ.12ರ ಬಾಲಕಾರ್ಮಿಕ ವಿರೋಧಿ ದಿನದಂದು ಮಕ್ಕಳನ್ನು ಕೆಲಸಕ್ಕೆ ಕಳಿಸದಂತೆ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ದುಡಿಮೆಯಿಂದ ರಕ್ಷಿಸುವಂತೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್ಒ) ಎಲ್ಲ ರಾಷ್ಟ್ರಗಳಿಗೆ ಸೂಚಿಸಿದೆ. ಈ ನಿಟ್ಟಿನಲ್ಲಿ 2020ರ ಬಾಲ ಕಾರ್ಮಿಕರ ವಿರೋಧಿ ದಿನಾಚರಣೆ ಕುರಿತು 'ಕರೊನಾ ವೈರಸ್ ಸಂದರ್ಭದಲ್ಲಿ ಬಾಲ ಕಾರ್ಮಿಕತೆಯಿಂದ ಮಕ್ಕಳನ್ನು ರಕ್ಷಿಸಿ, ಇಂದು ಮತ್ತು ಮುಂದಿನ ದಿನಗಳಲ್ಲಿ' ಎಂಬ ಘೋಷಣೆ ಹೊರಡಿಸಿದೆ.




**ಇಂದು ಬಾಲ ಕಾರ್ಮಿಕ ವಿರೋಧಿ ದಿನ**

## ವರ್ಷವಾರು ಬಾಲಕಾರ್ಮಿಕರ ರಕ್ಷಣಾ ವಿವರ

| ವರ್ಷ | ತಪಾಸಣೆ | ರಕ್ಷಣೆ | ಪತ್ತೆ | ದಾಖಲು | ಶಿಕ್ಷೆ | ವಿಧಿಸಿದ ದಂಡ |
|---|---|---|---|---|---|---|
| 2014 | 28567 | 202 | 142 | 145 | 50 | 5,32,150 |
| 2015 | 21243 | 179 | 87 | 88 | 17 | 1,82,500 |
| 2016 | 21116 | 193 | 111 | 100 | 20 | 1,74,000 |
| 2017 | 18666 | 241 | 167 | 141 | 71 | 4,14,000 |
| 2018 | 21000 | 157 | 141 | 123 | 30 | 3,55,500 |
| 2019 | 12569 | 237 | 162 | 96 | 20 | 2,66,000 |
| 2020 ಏಪ್ರಿಲ್ | 1494 | 33 | 26 | 22 | 1 | 45,000 (ರೂ.ಗಳಲ್ಲಿ) |

**270 ಬಾಲಕಾರ್ಮಿಕರ ರಕ್ಷಣೆ:** ಭಾರತದಲ್ಲಿ ಎಂ.ಎಸ್.ಗುರುಪಾದಸ್ವಾಮಿ ನೇತೃತ್ವದ ಸಮಿತಿ ಶಿಫಾರಸಿನ ಮೇರೆಗೆ 6ರಿಂದ 14 ವರ್ಷದೊಳಗಿನ ಮಕ್ಕಳು ಯಾವುದೇ ಕೆಲಸ ಮಾಡುವುದನ್ನು ನಿಷೇಧಿಸಿ 1986ರಲ್ಲಿ ಬಾಲಕಾರ್ಮಿಕ ಕಾಯ್ದೆ ಜಾರಿಗೊಳಿಸಲಾಯಿತು. ನಂತರ ಅದನ್ನು 2016ರಲ್ಲಿ ತಿದ್ದುಪಡಿ ಮಾಡಿ 6ರಿಂದ 14 ವರ್ಷದೊಳಗಿನ ಮಕ್ಕಳ ಎಲ್ಲ ದುಡಿಮೆ ಪ್ರಕ್ರಿಯೆ ಹಾಗೂ ಅಪಾಯಕಾರಿ ಉದ್ದಿಮೆಗಳಲ್ಲಿ 15ರಿಂದ 18 ವರ್ಷದ ಕಿಶೋರಾವಸ್ಥೆ ಮಕ್ಕಳ ದುಡಿಮೆಯನ್ನು ನಿಷೇಧಿಸಿದೆ. ಈ ಕಾಯ್ದೆಯಡಿ ಜನವರಿ 2019 ರಿಂದ ಮೇ-2020ರವರೆಗೆ ರಾಜ್ಯದಲ್ಲಿ 270 ಬಾಲಕಾರ್ಮಿಕರನ್ನು ರಕ್ಷಿಸಲಾಗಿದೆ.

**ರಾಜ್ಯ ಸರ್ಕಾರದದಿಂದ ಬಾಲ ಕಾರ್ಮಿಕರ ತಪಾಸಣೆಗೆ 2020-21ನೇ ಸಾಲಿಗೆ 4 ಕೋಟಿ ರೂ. ಅನುದಾನ ನೀಡಿದ್ದು, ಬಾಲಕಾರ್ಮಿಕರ ಪುನರ್ವಸತಿಗಾಗಿ ಬಳಸಲಾಗುವುದು.**

| **ಡಾ.ಜಿ.ಮಂಜುನಾಥ್** ಅಪರ ಕಾರ್ಮಿಕ ಆಯುಕ್ತರು, ಬಾಲಕಾರ್ಮಿಕ ವಿಭಾಗ

**ಮಕ್ಕಳ ದುಡಿಮೆ ಗಂಭೀರ ಅಪರಾಧ:** ಯಾವುದೇ ವಲಯಗಳಲ್ಲಿ 14 ವರ್ಷದೊಳಗಿನ ಬಾಲ್ಯಾವಸ್ಥೆ ಹಾಗೂ ಅಪಾಯಕಾರಿ ಸ್ಥಳದಲ್ಲಿ 15ರಿಂದ 18 ವರ್ಷದ ಕಿಶೋರವಸ್ಥೆ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಭಾರತದ ಸಂವಿಧಾನದ ಆಶಯಕ್ಕೆ ವಿರುದ್ಧ. ಶಿಕ್ಷಣ ಹಕ್ಕು ಕಾಯ್ದೆ 2009, ಬಾಲನ್ಯಾಯ ಕಾಯ್ದೆ, 2015 ಹಾಗೂ ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ ಕಾಯ್ದೆ-1986ರ ಪ್ರಕಾರ ಶಿಕ್ಷಾರ್ಹ ಹಾಗೂ ಸಂಜ್ಞೆಯ ಅಪರಾಧವಾಗಿದೆ. ತಪ್ಪಿತಸ್ಥ ಮಾಲೀಕನ ಮೊದಲ ಅಪರಾಧಕ್ಕೆ 6 ತಿಂಗಳಿನಿಂದ 2 ವರ್ಷಗಳವರೆಗೆ ಜೈಲು ಶಿಕ್ಷೆ, 20ರಿಂದ 50 ಸಾವಿರ ರೂ.ಗಳವರೆಗೆ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿರುತ್ತದೆ. ಬಾಲಕಾರ್ಮಿಕತೆಯಿಂದ ರಕ್ಷಿಸಿದ ಮಕ್ಕಳನ್ನು ರಾಜ್ಯದ 22 ಬಾಲಕಾರ್ಮಿಕ ತರಬೇತಿ ಕೇಂದ್ರಗಳಿಗೆ ಸೇರಿಸಬಹುದು.

**ವಿದ್ಯಾರ್ಥಿಗಳ ಟ್ರ್ಯಾಕಿಂಗ್:** ರಾಜ್ಯದ ಶಿಕ್ಷಣ ಇಲಾಖೆಯು ಸಮಗ್ರ ಶಿಕ್ಷಣ ಅಭಿಯಾನ ಯೋಜನೆಯಡಿ 'ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆಗೆ ಆನ್‌ಲೈನ್ ಅವಕಾಶ ಕಲ್ಪಿಸಿದೆ. ಎಲ್ಲ ಕೇಂದ್ರಗಳಲ್ಲಿ ಅಭ್ಯಾಸ ಮಾಡುವ ಮಕ್ಕಳನ್ನು ಸ್ಯಾಟ್ಸ್ ಮೂಲಕ ಟ್ರ್ಯಾಕಿಂಗ್ ಮಾಡಲಾಗುತ್ತಿದೆ. ಜತೆಗೆ ಬಾಲಕಾರ್ಮಿಕ ನಿಷೇಧ ಕಾಯ್ದೆ ಪರಿಣಾಮಕಾರಿ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದ ಪೆನ್ಸಿಲ್ ಪೋರ್ಟಲ್ ಬಳಕೆ ಮಾಡಲಾಗುತ್ತಿದೆ.